

ಪುರುಷ ಪ್ರಧಾನ ದಾಂಪತ್ಯದ ವ್ಯವಸ್ಥೆಗೆ ಒಳಪಟ್ಟ ಹೆಣ್ಣು ಕಾಮಕೂಟದ ರೀತಿನೀತಿಗಳನ್ನು ಎಷ್ಟರ ಮಟ್ಟಿಗೆ ಒಪ್ಪಿಕೊಳ್ಳುತ್ತಾಳೆ?

ಡಾ.ವಿನೋದ ಛೆಬ್ಬಿ

# 116: ಹೆಣ್ಣಿನ ಕಾಮಪ್ರಜ್ಞೆ–1

ನಾವು ಮಾನವರು ಲೈಂಗಿಕ ಜೀವಿಗಳು. ನಮ್ಮ ಲೈಂಗಿಕ ಸಾಂಗತ್ಯಕ್ಕಾಗಿ ದಾಂಪತ್ಯ ಎನ್ನುವ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದೇವೆ. ಹಾಗೂ ದಾಂಪತ್ಯದಲ್ಲಿ ಲೈಂಗಿಕ ಕ್ರಿಯೆ ನಡೆಯಬೇಕು ಎಂಬ ಆದೇಶಕ್ಕೆ ಒಳಪಟ್ಟು, ನಡೆಯುತ್ತದೆ ಎಂದು ನಂಬುತ್ತೇವೆ. ದಾಂಪತ್ಯದ ನೆಲೆಗಟ್ಟು ಪುರುಷ ಪ್ರಧಾನವಾದುದು ಎಂಬುದು ನಿರ್ವಿವಾದ. ಹಾಗಾದರೆ, ಲೈಂಗಿಕ ಕ್ರಿಯೆಯನ್ನು ಹೆಣ್ಣಿನ ದೃಷ್ಟಿಕೋನದಿಂದ ಅವಲೋಕಿಸಿದರೆ ಏನೇನು ಕಂಡುಬರಬಹುದು? ಪುರುಷ ಪ್ರಧಾನ ದಾಂಪತ್ಯದ ವ್ಯವಸ್ಥೆಗೆ ಒಳಪಟ್ಟ ಹೆಣ್ಣು ಅದರಲ್ಲಿ ನಡೆಯುವ ಕಾಮಕೂಟದ ರೀತಿನೀತಿಗಳನ್ನು ಎಷ್ಟರ ಮಟ್ಟಿಗೆ ಒಪ್ಪಿಕೊಳ್ಳುತ್ತಾಳೆ? ಕೂಡುವ ಆಯ್ಕೆಯನ್ನು ಹೆಣ್ಣಿಗೇ ಬಿಟ್ಟುಕೊಟ್ಟರೆ ಏನೇನು ಯೋಚಿಸಬಹುದು, ಹಾಗೂ ಏನನ್ನು ಆಯ್ಕೆ ಮಾಡಿಕೊಳ್ಳಬಹುದು ಎನ್ನುವ ವಿಷಯವು ನನ್ನನ್ನು ಯೋಚಿಸುವಂತೆ ಪ್ರೇರೇಪಿಸಿತು. ಅದನ್ನೇ ಒಂದು ದಂಪತಿಯ ದೃಷ್ಟಾಂತದೊಂದಿಗೆ ಶುರುಮಾಡುತ್ತಿದ್ದೇನೆ.

ಈ ದಂಪತಿಯ ಖಾಸಗಿತನವನ್ನು ಕಾಪಾಡಲು ಇವರಿಗೆ ಸಂದಿಗ್ಧಾ ಹಾಗೂ ಸಂತೋಷ ಎಂದು ಹೆಸರಿಡೋಣ. ಹಿರಿಯರು ಯೋಜಿಸಿದ ಈ ದಾಂಪತ್ಯವು ವರ್ಷಕಂಡಿದೆ. ಗಂಡ ಹೆಂಡತಿ ಅಪರೂಪವೆನ್ನುವ ಮಟ್ಟಿಗೆ ಅನ್ಯೋನ್ಯತೆಯಿಂದ ಇದ್ದಾರೆ. ಆದರೆ ಸಮಸ್ಯೆ ಏನೆಂದರೆ, ಅವರಲ್ಲಿ ಇನ್ನೂ ಮೊದಲ ಸಂಭೋಗ ನಡೆದಿಲ್ಲ. ಹಾಗೆಂದು ಲೈಂಗಿಕ ಕ್ರಿಯೆಯೇ ನಡೆದಿಲ್ಲ ಎಂತಲ್ಲ – ಅದು ಹೆಚ್ಚುಕಡಿಮೆ ನಿತ್ಯವೂ ನಡೆಯುತ್ತಿದೆ. ಆದರೆ ಸಂತೋಷನು ಪ್ರವೇಶ ಮಾಡಬೇಕೆಂದು ಹೊರಟಾಗಲೆಲ್ಲ ಸಂದಿಗ್ಧಾ ಅವನನ್ನು ತಡೆಯುತ್ತಾಳೆ. ಯಾಕೆಂದರೆ ಆಕೆಗೆ ಸಂಭೋಗದಲ್ಲಿ ನೋವಿನ ಭಯವಿದೆ. ಅವನು ಬೆರಳನ್ನು ಒಳಸೇರಿಸಲು ಹೊರಟರೂ ಸಾಕು, ಮೈ ಬಿಗಿಹಿಡಿಯುತ್ತ ಒಲ್ಲೆಯೆನ್ನುತ್ತಾಳೆ. ಕಡೆಗೆ ಸಂಭೋಗವಿಲ್ಲದೆ ಒಬ್ಬರನ್ನೊಬ್ಬರು ಉದ್ರೇಕಿಸುತ್ತ ಕಾಮತೃಪ್ತಿ ಹೊಂದುತ್ತಿದ್ದಾರೆ. ಇದರಲ್ಲಿ ಅವರಿಗೆ ಸಂತೃಪ್ತಿಯೂ ಇದೆ. ಆದರೆ ಸಂಭೋಗವಿಲ್ಲದೆ ಮಗು ಆಗುವುದಿಲ್ಲವಲ್ಲ? ಹಾಗಾಗಿ ನನ್ನಲ್ಲಿ ಬಂದಿದ್ದಾರೆ. ನಾನು ವಿವರಗಳನ್ನು ಕಲೆಹಾಕುತ್ತ, ಯೋನಿಪ್ರವೇಶದ ಯಾವ ಹಂತದಲ್ಲಿ ನೋವಾಗುತ್ತದೆ ಎಂದು ಕೇಳಿದಾಗ ಕುತೂಹಲಕರ ಸಂಗತಿಯೊಂದು ಕಂಡುಬಂದಿದೆ: ಸಂದಿಗ್ಧಾಳ ಜನನಾಂಗಕ್ಕೆ ಇಲ್ಲಿಯ ತನಕ ಶಿಶ್ನದ ಸ್ಪರ್ಶವಾಗಿಯೇ ಇಲ್ಲ. ಆದರೂ ನೋವಾಗಬಹುದೆಂದು ಭಯಪಡುತ್ತಿದ್ದಾಳೆ. ಅಂದರೆ, ಆಕೆಗೆ ನೋವಾದ ನಂತರ ಭಯ ಹುಟ್ಟಿಲ್ಲ ವಿನಾ ನೋವಿನ ಪೂರ್ವಾನುಭವ ಇಲ್ಲದೆಯೇ ನೋವಾಗುತ್ತಿದೆ! ಅಂದರೆ, ಸಂಭೋಗದ ಬಗೆಗಿನ ನೋವಿನ ಭಯವು ಆಕೆಯ ಕಲ್ಪನೆಯಲ್ಲೇ ಇದೆ – ಕೆಲವರಿಗೆ ಹಾವನ್ನು ದೂರದಿಂದ ಕಂಡರೂ ಸಾಕು, ಸಾವಿನ ಕಲ್ಪನೆ ಮೂಡಿದ ಹಾಗೆ.

ಸಂಭೋಗದಲ್ಲಿ ನೋವಿನ ಪೂರ್ವಾನುಭವ ಇಲ್ಲದೆ 'ನೋವಾಗುತ್ತದೆ' ಎಂದು ಕಲ್ಪಿಸಿಕೊಳ್ಳುವುದರ ಹಿಂದೆ ಹಲವು ಕಾರಣಗಳಿವೆ. ಚಿಕ್ಕಂದಿನಲ್ಲಿ ಲೈಂಗಿಕ ದುರ್ಬಳಕೆಗೆ ಒಳಗಾಗಿರುವುದು ಒಂದು ಕಾರಣ. ಲೈಂಗಿಕ ದುರ್ಬಳಕೆ ಎಂದರೆ ಅತ್ಯಾಚಾರದಂತಲ್ಲ. ದುರ್ಬಳಕೆಯ ದುರುಳರು ಹೆಚ್ಚಾಗಿ ಮಗುವಿನ ಪರಿಚಯದವರೇ ಆಗಿರುವುದರಿಂದ ಅದರ ಜನನಾಂಗವನ್ನು ಅತಿಕ್ರಮಿಸಲು ಯತ್ನಿಸುವುದಿಲ್ಲ; ಉಪಯೋಗಿಸಿಕೊಳ್ಳುತ್ತಾರಷ್ಟೆ. ನನಗೆ ಗೊತ್ತಿರುವ ಒಬ್ಬಳು ಎರಡೂವರೆ ವರ್ಷದವಳಿರುವಾಗ ಮನೆಯಾಳು ಆಕೆಯೊಡನೆ ತಮಾಷೆ ಮಾಡುತ್ತ ಸೂಜಿಯಿಲ್ಲದ ಇಂಜಕ್ಷನ್ ಸಿರಿಂಜನ್ನು ಚುಚ್ಚುತ್ತೇನೆಂದು ಆಕೆಯ ಚಡ್ಡಿಗೆ ಮುಟ್ಟಿಸಿದ್ದ. ಸಿರಿಂಜಿನ ಮೊಂಡು ತುದಿಯು ಅವಳ ಖಾಸಗಿ ಭಾಗಕ್ಕೆ ಸ್ವಲ್ಪವೇ ನಾಟಿ ಭಯವಾಗಿತ್ತು. ಮುಂದೆ ಆಕೆ ಪ್ರೇಮಿಯೊಂದಿಗೆ ಸಂಭೋಗದಲ್ಲಿ ತೊಡಗುವಾಗಲೆಲ್ಲ ಸಂಗತಿ ಮರುಕಳಿಸುತ್ತ ಸಂಭೋಗವೇ ಬೇಡವೆನ್ನುವಂತೆ ಮಾಡುತ್ತಿತ್ತು. ಇಂಥ ಆಘಾತಕರ ಅನುಭವಗಳು (ಸುಪ್ತಮನಸ್ಸಿನಲ್ಲಿ ಸಂಗ್ರಹವಾಗದೆ) ಶರೀರದ ಆಯಾ ಭಾಗದಲ್ಲಿ 'ನಾಟಿ' ಬೇರೂರುತ್ತವೆ. ಮುಂದೆ ಆ ಭಾಗವು ಕ್ರಿಯಾಶೀಲವಾಗಲು ಹೊರಟಾಗ ಅಲ್ಲಿ ಮೊದಲೇ ನಾಟಿಯಾದ ಅನುಭವವು ಮನಸ್ಸಿನ ಹಿಡಿತ ಮೀರಿ ಮರುಕಳಿಸುತ್ತದೆ. ಆಗ ಅದರೊಂದಿಗಿನ ಭಯ, ಆತಂಕದಂಥ ಭಾವನೆಗಳೂ ಪ್ರಕಟಗೊಳ್ಳುತ್ತವೆ.

ಆದರೆ ಸಂದಿಗ್ಧಾ ಮುಂಚೆ ಯಾವಾಗಲಾದರೂ ಲೈಂಗಿಕ ದುರ್ಬಳಕೆಗೆ ಒಳಗೊಂಡಿದ್ದಿದೆಯೇ ಎಂದು ಕೇಳಿದಾಗ ಇಲ್ಲವೆಂದು ಉತ್ತರಿಸಿದ್ದಾಳೆ.

ಎರಡನೆಯ ಕಾರಣವೆಂದರೆ, ನಮ್ಮ ವ್ಯವಸ್ಥೆಯಲ್ಲಿ ಮದುವೆಗೆ ತಯಾರಾದ ಹೆಣ್ಣಿಗೆ ಹಿರಿಯ ಹೆಂಗಸರು ಲೈಂಗಿಕ ಕ್ರಿಯೆಯ ಮಾಹಿತಿ ನೀಡುವುದು ವಾಡಿಕೆಯಲ್ಲಿದೆ. ಕೆಲವರು ಸಂಭೋಗದ ಬಗೆಗೆ ಅರಿವು ಮೂಡಿಸುವ ಭರದಲ್ಲಿ, 'ಮೊದಲ ಸಂಭೋಗದಲ್ಲಿ ನೋವು ಹಾಗೂ ರಕ್ತಸ್ರಾವ ಆಗುತ್ತದೆ– ನಂತರ ಎಲ್ಲವೂ ಸರಿಹೋಗುತ್ತದೆ. ಏನೂ ಯೋಚಿಸಬೇಡ!' ಎಂದು ಭರವಸೆ(?) ಕೊಡುತ್ತಾರೆ. ಏನೇನೂ ಕಲ್ಪನೆಯಿಲ್ಲದ ಮನಸ್ಸಿನಲ್ಲಿ ನೋವು, ರಕ್ತದ ಕಲ್ಪನೆಯನ್ನು ಹರಿಬಿಡುತ್ತಾರೆ. ಪರಿಣಾಮ? ತರ್ಕದ ಪ್ರಕಾರ ಮೊದಲಿನ ಸಂಭೋಗದ ನಂತರ ಮುಂದಿನವು ಸುಖಕರವಾಗಿ ಆಗುತ್ತವೇನೋ ಸರಿ, ಆದರೆ ಅದಕ್ಕಾಗಿ ಮೊದಲನೆಯದನ್ನು ಹೇಗೆ ಎದುರಿಸಬೇಕು ಎನ್ನುವ ಪ್ರಶ್ನೆಯು ಸಮಸ್ಯೆಯಾಗಿ, ಸಮಸ್ಯೆಯು ಭಯವಾಗಿ ಕಾಡುವುದು ಸಹಜ. ಹಾಗಾಗಿ ಯಾವುದೇ ಹೆಣ್ಣಿಗೆ ಮೊದಲ ಸಂಭೋಗದಲ್ಲಿ ನೋವಿರುತ್ತದೆ ಎಂದು ಕಲ್ಪನೆ ಬಂದರೆ ಸಾಕು, ಆ ಅನುಭವಕ್ಕೇ ತೆರೆದುಕೊಳ್ಳಲು ಆಗುವುದಿಲ್ಲ. ಇದರ ಬಗೆಗೆ ಸಂದಿಗ್ಧಾಳನ್ನು ವಿಚಾರಿಸಿದಾಗ ತಿಳಿದುಬಂದಿದ್ದು: ಆಕೆಗೆ ಯಾರೂ ಮೊದಲ ಸಂಭೋಗದ ಬಗೆಗೆ ಮಾತೇ ಆಡಿಲ್ಲ.

ಮೂರನೆಯ ಕಾರಣವೆಂದರೆ, ಎಷ್ಟೋ ದಾಂಪತ್ಯಗಳಲ್ಲಿ ಗಂಡಹೆಂಡಿರ ಸಂಬಂಧವು ವಿಷಮವಾಗಿರುತ್ತದೆ. ಇಲ್ಲಿ ಗಂಡಂದಿರು ಹೆಂಡತಿಯನ್ನು ನಿರ್ಲಕ್ಷಿಸಿದರೂ ಕಾಮ ಕೆರಳಿದಾಗ ಆಕೆಯನ್ನು ಹಕ್ಕಿನಿಂದ ದಬಾಯಿಸುತ್ತಾರೆ. ಪರಿಣಾಮವಾಗಿ ನಡೆಯುವ 'ದಾಂಪತ್ಯದ ಅತ್ಯಾಚಾರ'ವು ಆಕೆಯ ಹೆಣ್ಣುಮಕ್ಕಳ ಕಣ್ಣಿಗೆ ಬಿದ್ದಿತು ಎಂದುಕೊಳ್ಳಿ. ಅವರು ಸಂಭೋಗವೆಂದರೆ ಪುರುಷಪ್ರೇರಿತ ಹಿಂಸಾತ್ಮಕ ವೇದನಾಭರಿತ ಕ್ರಿಯೆ ಎಂದು ಭಾವಿಸುವ ಸಂಭವವಿದೆ. ಇವರು ತಮಗೆ ಅರಿವಿಲ್ಲದಂತೆ ಅಮ್ಮನ ಜೊತೆಗೆ ಗುರುತಿಸಿಕೊಳ್ಳುತ್ತ ಅಪ್ಪನನ್ನು ವಿರೋಧಿಸುತ್ತಾರೆ. ಅದೇ ವಿರೋಧವನ್ನು ತನ್ನನ್ನು ಪ್ರೀತಿಸುವ ಗಂಡನ ಮೇಲೆ 'ಎಷ್ಟಾದರೂ ನೀನು ಅಪ್ಪನಂತೆ ಗಂಡು, ನನಗೆ ನೋವು ಕೊಟ್ಟೇಕೊಡುತ್ತೀಯಾ!' ಎಂದು ಪ್ರಕ್ಷೇಪಿಸುವ ಸಂಭವವಿದೆ. ಹಾಗಾಗಿ ಸಂದಿಗ್ಧಾಳಿಗೂ ಪ್ರೀತಿಯ ಗಂಡನ ಸಂಭೋಗಕ್ಕೆ ತನ್ನ ಶರೀರವನ್ನು ಬಿಟ್ಟುಕೊಡಬೇಕಾದಾಗ 'ಅವನು ಗಂಡು ತಾನು ಹೆಣ್ಣು' ಎನ್ನುವ ವಿಪರೀತ ಕಲ್ಪನೆ ಬರುತ್ತದೆಯೆ ಎಂದಿದ್ದಕ್ಕೆ ಹಾಗೇನೂ ಇಲ್ಲವೆಂದು ಉತ್ತರಿಸಿದಳು. ಅಷ್ಟಲ್ಲದೆ ತನ್ನ ಅಪ್ಪ ಅಮ್ಮ ಪರಸ್ಪರ ಪ್ರೀತಿಸುವುದನ್ನು ಪ್ರಸನ್ನತೆಯಿಂದ ಹಂಚಿಕೊಂಡಳು.

ಒಂದು ದಿಕ್ಕಿನಲ್ಲಿ ಯೋಚಿಸಿ ಉತ್ತರ ಸಿಗದಿರುವಾಗ ಇನ್ನೊಂದು ದಿಕ್ಕಿನಲ್ಲಿ ಯೋಚಿಸಲು ನಿರ್ಧರಿಸಿದೆ. ಅದಕ್ಕಾಗಿ ಸಂದಿಗ್ಧಾಳನ್ನು ಕೇಳಿದೆ. 'ಸಂದಿಗ್ಧಾ, ನಿಮ್ಮ ಸಂಭೋಗ, ನೋವು, ಭಯ – ಇಂಥದ್ದನ್ನೆಲ್ಲ ಪಕ್ಕಕ್ಕಿಟ್ಟು ನನ್ನ ಪ್ರಶ್ನೆಗೆ ಉತ್ತರ ಕೊಡುತ್ತೀರಾ?' ಆಕೆಯ ಲಕ್ಷ್ಯ ನನ್ನ ಕಡೆಗಿರುವುದನ್ನು ಖಚಿತಪಡಿಸಿಕೊಂಡು ಕೇಳಿದೆ: 'ನೀವು ಏಕೆ ಮದುವೆಯಾದಿರಿ? ಮದುವೆ ಆಗಲು ಕಾರಣವೇನು?'

ಸಂದಿಗ್ಧಾ ಬೆಚ್ಚಿಬಿದ್ದಳು. ಮೊದಲು ಗಲಿಬಿಲಿಗೊಂಡಳು. ನಂತರ ಸಾವರಿಸಿಕೊಂಡು ಉತ್ತರಿಸಿದಳು.

ಅದೇನೆಂಬುದನ್ನು ಮುಂದಿನ ವಾರ ನೋಡೋಣ.

ಉಚಿತ ಸಹಾಯವಾಣಿಗೆ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: **8050255229** (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: **8494944888** (11ರಿಂದ ಸಂಜೆ 5ರ ತನಕ). ದಾಂಪತ್ಯ ಸಮಸ್ಯೆಗಳ ಪರಿಹಾರಕ್ಕೆ 'ಸುಧಾ'ಕ್ಕೆ ಪತ್ರ ಬರೆಯಬಹುದು.